ಭಾರತೀಯ ಅಂಚೆ ಮತ್ತು ಆರ್.ಎಮ್.ಎಸ್.ಇಲಾಖೆ ನೌಕರರ
ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು
ನಂ. **23**, **1**ನೇ ಮಹಡಿ, ಹರೇ ಕೃಷ್ಣ ರಸ್ತೆ, ಶಿವಾನಂದ ಸರ್ಕಲ್ ಹತ್ತಿರ, ಬೆಂಗಳೂರು **560001**
ದೂರವಾಣಿ **080–41248612/22202119**

E-Mail : iprmscoops@gmail.com website : postalcoopsociety.org

## 7ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಆಮಂತ್ರಣ

ಮಾನ್ಯ ಸದಸ್ಯರೇ,

**2016–17ನೇ ಸಾಲಿನ ಮಹಾಸಭೆಯ ಸೂಚನಾ ಪತ್ರ**

ಸಂಘದ 7ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ **17.09.2017** ರಂದು ಭಾನುವಾರ ಬೆಳಿಗ್ಗೆ 11.00ಕ್ಕೆ ಸಂಘದ ಅಧ್ಯಕ್ಷರಾದ **ಶ್ರೀ.ಜೆ.ಕೃಷ್ಣಮೂರ್ತಿಯವರ** ಅಧ್ಯಕ್ಷತೆಯಲ್ಲಿ ನ್ಯೂ ಸ್ರಾಮಾಟ್ ರೆಸ್ಟೋರೆಂಟ್, ನಂ.173/1, ಎಸ್.ಸಿ.ರಸ್ತೆ, (ನಟರಾಜ್ ಥಿಯೇಟರ್ ಎದರು), **ಶೇಷಾದ್ರಿ ಪುರಂ**, ಬೆಂಗಳೂರು 560 020 ರಲ್ಲಿ ನಡೆಸಲಾಗುವುದು. ಮಾನ್ಯ ಸದಸ್ಯರು ಮಹಾಸಭೆಯ ಸಂಘದ ಕಾರ್ಯಕಲಾಪದಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

### ಕಾರ್ಯಕಲಾಪಗಳ ವಿವರ

1. ಪ್ರಾರ್ಥನೆ.
2. ಸ್ವಾಗತ ಭಾಷಣ.
3. ಸದಸ್ಯರ ಸಭೆಗೆ ಸೂಚನಾಪತ್ರವನ್ನು ಓದಿ ದಾಖಲಿಸುವುದು.
4. ದಿನಾಂಕ 18.09.2016 ರಂದು ನಡೆದ 6ನೇ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಓದಿ ಅಂಗೀಕರಿಸುವುದು
5. 2016–17ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಮಂಡನೆ ಮತ್ತು ಅನುಮೋದನೆ
6. 2016–17ನೇ ಸಾಲಿನ ಆಯವ್ಯಯ ಹೆಚ್ಚಾಗಿ ಖರ್ಚಾಗಿರುವ ಅಥವಾ ಉಳಿತಾಯವಾಗಿರುವ ಬಾಬ್ತುಗಳನ್ನು ಅನುಮೋದಿಸುವುದು ಹಾಗು 2017–18ನೇ ಸಾಲಿನ ಅಂದಾಜು ಪತ್ರಕ್ಕೆ ಮಂಜುರಾತಿಯನ್ನು ನೀಡುವುದು
7. ಅಧ್ಯಕ್ಷರ ಭಾಷಣ
8. ವಂದನಾರ್ಪಣೆ
9. ಸಭೆಯ ಮುಕ್ತಾಯದ ನಂತರ ಭೋಜನ

ದಿನಾಂಕ : 15–08–2017
ಸ್ಥಳ : ಬೆಂಗಳೂರು

**ಕಾರ್ಯಕಾರಿ ಮಂಡಳಿಯ ಆದೇಶದ ಮೇರೆಗೆ**
**ಸಹಿ/–**
**ಅಧ್ಯಕ್ಷರು**
**ಭಾರತೀಯ ಅಂಚೆ ಮತ್ತು ಆರ್.ಎಂ.ಎಸ್. ಇಲಾಖೆ ನೌಕರರ**
**ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು.**

**ವಿಶೇಷ ಸೂಚನೆ :** ಮಾನ್ಯ ಸದಸ್ಯರು ಸಭೆಗೆ ಬರುವಾಗ ಸಂಘದಿಂದ ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು ಹಾಗೂ ವಿಳಾಸದಲ್ಲಿ ಬದಲಾವಣೆ ಇದ್ದಲ್ಲಿ ಸಂಘದ ಕಛೇರಿಗೆ ತಿಳಿಸತಕ್ಕದ್ದು.

**2016-17 ನೇ ವಾರ್ಷಿಕ ಮಹಾಸಭೆಯ ವರದಿ:**

7ನೇ ವಾರ್ಷಿಕ ಮಹಾಸಭೆಯು ಸಂಘದ ದಿನಾಂಕ 17.09.2017ರಂದು ಸಾಮ್ರಾಟ್ ಹೋಟಲ್, ಶೇಷಾದ್ರಿಪುರಂ (ನಟರಾಜ್ ಥಿಯೇಟರ್ ಎದುರು), ಬೆಂಗಳೂರು 560020ರಲ್ಲಿ ಶ್ರೀ.ಕ್ರಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಂಘದ ಕಾರ್ಯದರ್ಶಿ ಮತ್ತು ಎಲ್ಲಾ ನಿರ್ದೇಶಕರ ಉಪಸ್ಥಿತಿಯಲ್ಲಿ ಹಾಗೂ ಆಹ್ವಾನಿತರಾದ ಸಂಘದ ಸದಸ್ಯರ ಸಮಕ್ಷಮದಲ್ಲಿ ಯಶ್ವಸಿಯಾಗಿ ನೆರವೇರಿತು.

1. **ಸ್ವಾಗತ ಭಾಷಣ:**

   ಮಹಾಸಭೆಯು ಕುಮಾರಿ ಪೂಜಾ ಹಾಗೂ ಕುಮಾರಿ ತೇಜಸ್ವಿನಿಯವರು ಶ್ರೀ ಸ್ತೋತ್ರದೊಂದಿಗೆ ಕಾರ್ಯಕ್ರಮಗಳು ಪ್ರಾರಂಭವಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ವಹಿಸಿದ ನಿರ್ದೇಶಕರಾದ ಶ್ರೀ.ನಟರಾಜ್‌ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ಶ್ರೀ.ಜೆ.ಕೃಷ್ಣಮೂರ್ತಿಯವರನ್ನು ಆಹ್ವಾನಿಸಿ ಮತ್ತು ಸಂಘದ ನಿರ್ದೇಶಕರುಗಳು ವೇದಿಕೆಗೆ ಬಂದು ಆಸೀನರಾಗಬೇಕೆಂದು ಕೋರುತ್ತಾ ಮತ್ತು ಬಂದಿರುವ ಎಲ್ಲಾ ಸದಸ್ಯರುಗಳನ್ನು ಸುಗುಮವಾಗಿ ನಡೆಸಿಕೊಡಬೇಕೆಂದು ವಿನಿಂತಿಸಿದರು.

2. **ಸರ್ವಸದಸ್ಯರ ಸಭೆಯ ನೋಟಿಸ್ ಓದಿ ದಾಖಲು ಮಾಡುವುದು ಮತ್ತು ದಿನಾಂಕ 18.09.2016 ರಂದು ನಡೆದ ವಾರ್ಷಿಕ ಮಹಾಸಭೆಯ ನಡುವಳಿಯನ್ನು ಅಂಗೀಕರಿಸುವುದು:**

   ಸರ್ವಸದಸ್ಯರ ಸಭೆಯ 7ನೇ ಸಭೆಯ ತಿಳಿವಳಿಕೆ ಪತ್ರವನ್ನು ಸಂಘದ ನಿರ್ದೇಶಕಿಯಾದ ಶ್ರೀಮತಿ.ವಸಂತಲಕ್ಷ್ಮಿರವರು ಸಭೆಗೆ ಓದಿ ಹೇಳಿ ಅನುಮೋದನೆಯನ್ನು ಪಡೆದರು ಹಾಗೂ 6ನೇ ವಾರ್ಷಿಕ ಮಹಾಸಭೆಯ ನಡುವಳಿಕೆಯನ್ನು ಸರ್ವ ಸದಸ್ಯರೆದರು ಓದಿ, ಸದಸ್ಯರ ಅನುಮೋದನೆಯನ್ನು ಕರತಾಡನದ ಮೂಲಕ ಪಡೆದರು.

3. **2016-2017ರ ಸಾಲಿನ ಆಯವ್ಯಯ (ಹೆಚ್ಚಾಗಿ ಖರ್ಚಾಗಿರುವ ಮತ್ತು ಉಳಿತಾಯವಾಗಿರುವ ಬಾಬ್ತು) ವನ್ನು ಮಂಡಿಸಿ ಅನುಮೋದನೆಯನ್ನು ಪಡೆಯುವುದು 2016-17ರ ಲೆಕ್ಕ ಪತ್ರ ಮಂಡನೆ ಮತ್ತು ಅನುಮೋದನೆ:**

   ಸಂಘದ ಉಪಧ್ಯಾಕ್ಷರಾದ ಶ್ರೀ.ಯು.ಎಸ್.ರಾಜೇಶ್‌ರವರು 2016-2017'ರ ಲೆಕ್ಕ ಪತ್ರವನ್ನು ಸಭೆಯಲ್ಲಿ ಓದಿ ಹೇಳಿ ಮಂಡಸಿ, 2016-2017ರ ಸಾಲಿನ ಅವಧಿಯಲ್ಲಿ ಮಂಜೂರಾದ ಆಯವ್ಯಯದಲ್ಲಿ ಹೆಚ್ಚಾಗಿ ಖರ್ಚಾಗಿರುವ ಅಥವಾ ಉಳಿತಾಯವಾಗಿರುವ ಬಾಬ್ತುಗಳನ್ನು ಸಭೆಗೆ ಓದಿ ಹೇಳಿ ಮತ್ತು 2017-18ರ ಮುಂಗಡ ಆಯವ್ಯಯವನ್ನು ಸಭೆಯಲ್ಲಿ ಮಂಡಿಸಿ, ಸದಸ್ಯರು ಕೈ ಎತ್ತುವುದರ ಮೂಲಕ ಅನುಮೋದನೆಯನ್ನು ಪಡೆದರು ಹಾಗೂ ಮುಂದುವರೆದು ಹೋದ ಸಾಲಿನ ಮುಂಗಡ ಆಯವ್ಯಯದಲ್ಲಿ ನಿದಿ ಪಡಿಸಿದ್ದಕ್ಕಿಂತ, ಕಡಿಮೆ ಹಣ ಖರ್ಚಾಗಿರುವುದಕ್ಕೆ ಹರ್ಷಪಡಿಸಿ ಸಭೆಯ ಗಮನಕ್ಕೆ ತಂದರು.

ಈ ಮಧ್ಯೆ ಕೆಲ ಸದಸ್ಯರು ತಮಗೆ ಸಭೆಯ ತಿಳುವಳಿಕೆ ಪತ್ರವು ಸಕಾಲದಲ್ಲಿ ತಲುಪಲಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಂಘದ ಎಲ್ಲಾ ಮೂಲ ಸದಸ್ಯರುಗಳಿಗೆ ಸಕಾಲದಲ್ಲಿ ತಿಳುವಳಿಕೆ ಪತ್ರಗಳನ್ನು ಅಂಚೆ ಕಛೇರಿಯಲ್ಲಿ ರವಾನೆ ಮಾಡಿದ್ದಾಗಿಯೂ, ಅಂತಹರದಲ್ಲೂ ತಲಪದಿರುವ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿದರು.

ಉಪಧ್ಯಾಕ್ಷರಾದ ಶ್ರೀ.ಯು.ಎಸ್.ರಾಜೇಶ್‌ರವರು ಸಭೆಗೆ ಅನಿರೀಕ್ಷಿತವಾಗಿ ಬಂದ ಸಹ ಸದಸ್ಯರುಗಳಿಗೆ ಬಡಾವಣೆಯ ಬಗ್ಗೆ ವಿವರಗಳನ್ನು ತಿಳದುಕೊಳ್ಳಲು ಸಭೆಯು ಅವಕಾಶವನ್ನು ಮಾಡಿಕೊಡಬೇಕೆಂದು ವಿಜ್ಞಪಿಸಿದರು. ಬಡಾವಣೆಯ ಅಭಿವೃದ್ಧಿ ಕಾರ್ಯವು ವಿಳಂಬ ರೀತಿಯನ್ನು ಅನುಸರಿಸುತ್ತಿರುವ ಬಗ್ಗೆ ಸಹಸದಸ್ಯರುಗಳು ಪ್ರಶ್ನಿಸಿದಾಗ ಶ್ರೀ. ರಾಜೇಶ್‌ರವರು ಕೊನೆಯ ಹಂತದಲ್ಲಿರುವ ಭೂಸ್ವಾಧೀನ ಪ್ರಕ್ರಿಯೆಗೆ ಬಂದೊದಗುತ್ತಿರುವ ಎಲ್ಲಾ ಅಡಚಣೆಗಳನ್ನು ಅಂದರೆ, ನ್ಯಾಯಾಲುದಲ್ಲಿನ ದಾವೆಗಳು ಇತ್ಯಾದಿಗಳಿಂದ ಸುಮಾರು 70-80ಭಾಗ ಬಗೆ ಹರಿದಿದೆ ಮತ್ತು ಸಂಘದ ಎಲ್ಲಾ ಕೆಲಸಗಳು ಪಾರದರ್ಶವಾಗಿದೆ ಎಂದು ಸಭೆಗೆ ತಿಳಿಸುತ್ತಾ, ಮುಂದಿನ ವಿಶೇಷ ಸಭೆಯನ್ನು ಕೇವಲ ನಿವೇಶನಕ್ಕೆ ಪೂರ್ತಾ ಹಣ ಕಟ್ಟಿರುವವರ ಹಾಗೂ ಸಾಧ್ಯವಾದರೆ ಬಾಕಿ ಕಂತುಗಳನ್ನು ಉಳಿಸಿಕೊಂಡಿರುವ ಸದಸ್ಯರು/ಸಹಸದಸ್ಯರಗಳನ್ನು ಆಹ್ವಾನಿಸಿ ಬಡಾವಣೆಯಲ್ಲೇ ನಡೆಸುವುದಾಗಿ ತಿಳಿಸಿದರು.

ಇಲ್ಲಿಯವರೆಗೂ ತಾಳ್ಮೆಯಿಂದ ಸಂಘದೊಡನೆ ಕೈಜೋಡಿಸಿ ಸಹಕರಿಸುತ್ತಿರುವ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.

5. <u>ಸದಸ್ಯರು/ಸಹಸದಸ್ಯರಿಂದ ಬಂದ ಅನಿಸಿಕೆಗಳು ಹಾಗು ಅದಕ್ಕೆ ಆಡಳಿತ ಮಂಡಳಿಯ ಸಮಾಜಾಯಿಶಿಗಳು:</u>

<u>ಸದಸ್ಯರಾದ ಶ್ರೀ.ಮೋತಿಲಾಲ್ ಠಾಕೂರು (ಸದಸ್ಯತ್ವ ನಂ.1021) ರವರ ಪ್ರತಿನಿಧಿ ಮಾತಾನಾಡಿ</u>

ಸಂಘವು ತನ್ನ ಹೆಸರಿನಲ್ಲಿ ಎಷ್ಟು ಎಕರೆ ಭೂಸ್ವಾದೀನವನ್ನು ಮಾಡಿಕೊಂಡಿದೆ ಹಾಗೂ ಹಣ ಕಟ್ಟಿರುವ ಎಲ್ಲಾರಿಗೂ ನಿವೇಶನ ಸಿಗುವುದಾ ? ಏನಾದರೂ ಆಡಚಣೆಯಿದ್ದಲ್ಲಿ ನೀವು (ಸಂಘ) ಬಯಸಿದರೆ ನಮ್ಮ ಸಹಕಾರವನ್ನು ಕೊಡುತ್ತೇವೆಂದು ತೀಳಿಸಿದರು.

ಶ್ರೀ.ಮೋತಿಲಾಲ್ ಠಾಕೂರುರವರ ಪ್ರಶ್ನೆಗೆ ಉತ್ತರವಾಗಿ ಶ್ರೀ. ರಾಜೇಶ್ (ಉಪಧ್ಯಾಕ್ಷರು) ಮಾತಾನಾಡಿ, ಹಣಕಟ್ಟಿರುವ ಎಲ್ಲಾ ಸದಸ್ಯರಿಗೂ ನಿವೇಶನ ಸಿಗುವುದೆಂದು ಹಾಗೂ ಭೂಸ್ವಾಧೀನದ ವಿಷಯಕ್ಕೆ ತಿಳಿಯಬೇಕೆಂದಿದ್ದಾರೆ ಕಛೇರಿಗೆ ಬಂದು Documentಗಳನ್ನು ಪರಿಶೀಲಿಸಬೇಕೆಂದು ತಿಳಿಸಿದರು.

ಸದಸ್ಯರಾದ ಶ್ರೀಮತಿ ಅಭೀದಾ ಖನ್ನಂ (ಸದಸ್ಯತ್ವ ನಂ.210) ರವರ ಪ್ರತಿನಿಧಿ ಮಾತಾನಾಡಿ

ಆದಷ್ಟು ಬೇಗನೆ ಈ ವರ್ಷದಲ್ಲಿ ಭೂ ಅಭಿವೃದ್ಧಿ ಪ್ರಾರಂಭಿಸಿ ಎಲ್ಲಾ ಚಿಡಿಟಚಿಜು ಗಳನ್ನು ನಿವಾರಣೆ ಮಾಡಿಕೊಳ್ಳಲು ತಿಳಿಸಿ, ಎಂದಿಗೂ ನಮ್ಮಗಳ ಸಹಾಕಾರವಿದೆಯೆಂದು ತಿಳಿಸಿದರು..

ಶ್ರೀ.ಜುತುರೀ (ಸದಸ್ಯತ್ವ ನಂ.73) ರವರು ಮಾತಾನಾಡಿ ಸಂಘದ ಕೆಲವು ಪದಾದಿಕಾರಿಗಳು ಸಂಘದ ಬೆಳೆವಣಿಗಾಗಿ ಶ್ರಮಿಸಿತ್ತಿರುವುದನ್ನು ನಾನು ವ್ಯಯಕ್ತಿಕವಾಗಿ ಗಮನಿಸುತ್ತಿದ್ದೇನೆ. ಕಚೇರಿಯ ದೈನಂದಿನ ಒತ್ತಡದ ಕೆಲಸದ ನಡುವೆಯೂ ಸಂಘದ ಕೆಲಸ ಕಾರ್ಯದಲ್ಲಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ, ಇದಕ್ಕೆ ತಕ್ಕಂತೆ ಸರ್ಕಾರಿ ಕಛೇರಿಯಲ್ಲಿ ನ್ಯಾಯಾಲಯದಲ್ಲಿ ಭೂ ಅಭಿವೃದ್ಧಿದಾರರೊಂದಿಗೆ, ರೈತರೊಡನೆ ಮಧ್ಯವರ್ತಿಗಳ ಅಸಹಕಾರ, ಪ್ರವ್ರತ್ತಿ ಮುಂತಾದವುಗಳನ್ನು ಅಭಿವೃದ್ಧಿ ಕಾರ್ಯಕ್ಕೆ ಸ್ವಲ್ಪ ಪ್ರಮಾಣದಲ್ಲಿ ಕುಂಠಿತವಾಗುಬುದಕ್ಕೆ ಕಾರಣಗಳಾಗಿವೆ ಎಂದೂ ಸಹ ತಿಳಿಸಿದರು. ಇವುಗಳೆಲ್ಲದರ ಜೊತೆಗೆ, ಪ್ರಕೃತಿ ವಿಕೋಪ, ಆಜುಟಿಟಿಚಿಜುಟಿ ಹಾಗೂ ಹೊಸದಾಗಿ ಸ್ಥಾಪಿಸಿರುವ ಕೇಂದ್ರ ಸರ್ಕಾರದ ರೇರಾ ಸಂಸ್ಥೆ, ಇವುಗಳೆಲ್ಲವುಗಳಿಗೆ ಹೊಂದಿಕೊಳ್ಳಲು, ಕಾಲಾವಕಾಶ ಬೇಕಾಗಿರುವುದರಿಂದ ಅಭಿವೃದ್ಧಿ ಕಾರ್ಯಗಳು ವಿಳಂಭವಾಗುವುದಕ್ಕೆ ಕಾರಣಗಳು ಬಹುದೆಂದು ತಿಳಿಸಿದರು. ಇವುಗಳೆಲ್ಲವುದರ ಮಧ್ಯೆ ಆಡಳಿತ ಮಂಡಳಿಯ ಜೊತೆ ಎಲ್ಲಾ ಸದಸ್ಯರು/ಸಹಸದಸ್ಯರು ಕೈಜೋಡಿಸಿ, ಸಹಕರಿಸಿ ಬಹು ನರೀಕ್ಷಿತ ನಿವೇಶಗಳ ಹಂಚಿಕೆ ಕಾರ್ಯ ಆದಷ್ಟು ಬೇಗ ಎಂಬುದಾಗಿ ತಿಳಿಸಿದರು.

ವಿಶೇಷ ಅಹ್ವಾನಿತಾರಾದ, ಪ್ರಜಾವಾಹಿನಿ ಗೃಹ ನಿರ್ಮಾಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ.ಮಹೇಶ್ವರಪ್ಪರವರು ನಮ್ಮ ವಶೇಷ ಕೋರಿಕೆಯ ಮೇಲೆ ನೆರೆದಿದ್ದ ಸಭೆಯನ್ನು ಉದ್ದೇಶಿಸಿ, ಮಾತಾನಾಡುತ್ತಾ, ನಾನೂ ಸಹ ಸಹಕಾರ ಸಂಘದಲ್ಲಿ ಕೆಲಸಮಾಡುತ್ತಲ್ಲಿದ್ದು ನಿವೃತಿಯ ನಂತರ ತಮ್ಮ ಸಂಘವನ್ನು ಸ್ಥಾಪಿಸಿ ಇದೇ ಮೆ!! ವಾಸವಿ ಡೆವಲಪರ್ಸ್ ಜೊತೆ ಒಡಂಬಡಿಕೆ ಹೊಂದಿದ್ದು ಬಡಾವಣೆ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿ ಕೊಂಡಿದ್ದೇವೆ. ಸ್ನೇಹಿತರಾದ ನಿಮ್ಮ ಸಂಘದ ಅಧ್ಯಕ್ಷರಾದ ಶ್ರೀ.ಜೆ.ಕೃಷ್ಣಮೂರ್ತಿಗಳು ಮತ್ತು ನಾನು ಸಮಾನಾವಾಗಿ ಸಂಘದ ಎಲ್ಲಾ ಕಷ್ಟ-ಸುಖಗಳ ಬಗ್ಗೆ ಭಾಗಿಯಾಗಿದ್ದೇನೆ. ನಿಮ್ಮ ಸಂಘವು ಬಹಳಷ್ಟು ಬಡಾವಣೆಯ ಕಾರ್ಯವನ್ನು ಮುದುಸುದೆ. ನ್ಯಾಯಾಲದ ದಾವೆಗಳು ಇತ್ಯಾದಿಗಳನ್ನು ನಿರಂತರವಾಗಿ ಹೋರಾಡುತ್ತಾ ಬಂದಿರುತ್ತಾರೆ. ನಿವೇಶನಗಳ ಹಂಚಿಕೆ ವಿಳಂಬವಾಗಿರುವುದಕ್ಕೆ ಸದಸ್ಯರುಗಳಲ್ಲಿ ಗೊಂದಲ ಉಂಟಾಗುವುದು ಸಹಜ ಇವುಗಳ ಮಧ್ಯೆ ಸಂಘದ ವಿರುದ್ಧ ಇದೊಂದು ಕುಟಂಬ ಇದ್ದ ಹಾಗೆ, ತಮ್ಮಲ್ಲೆರ ಸಹಕಾರವನ್ನು ತಾಳ್ಮೆಯಿಂದ ಕೊಟ್ಟು ಸಂಘದ ಪದಾಧಿಕಾರಿಗಳ ಜವಬ್ದಾರಿಗೆ ತಾವೂ ಹೆಗಲು ಕೊಟ್ಟು ನಿಲ್ಲಬೇಕೆಂದು ಮನವರಿಕೆ ಮಾಡಿಕೊಟ್ಟರು.

6. <u>ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ಸುತ್ತೋಲೆ ಪ್ರಕಾರ 2017-18ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನು ನೇಮಿಸಿಕೊಳ್ಳುವ ವಿಚಾರ</u>

ಈ ವಿಚಾರದಲ್ಲಿ ಚರ್ಚಿಸಿಲಾಯಿತು. ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ಸುತ್ತೋಲೆ ಪ್ರಕಾರ ಪರಿಶೋಧನಾ ಇಲಾಖೆಯ ಸುತ್ತೋಲೆಪ್ರಕಾರ ಸಂಘದ 2017-18ನೇ ಸಾಲಿಗೆ ಲೆಕ್ಕ ಪರಿಶೋಧಕರರಾದ ಶ್ರೀ. ಮಂಜುನಾಥ್ ಭಾರ್ಗೆಶಪ್ಪ & ಸದಸ್ಯರು, ಸನ್ನದು: ಲೆಕ್ಕ ಪರಿಶೋಧಕರು, ಬೆಂಗಳೂರು ಇವರನ್ನು ನೇಮಿಸಿಕೊಳ್ಳಲು ತೀರ್ಮಾನಿಸಲಾಯಿತು.

7. <u>ಅಧ್ಯಕ್ಷರ ಭಾಷಣ:-</u>

ಸಂಘದ ಅಧ್ಯಕ್ಷರಾದ ಶ್ರೀಯುತ ಜೆ.ಕೃಷ್ಣಮೂರ್ತಿಯವರು, ಮೊದಲೆಯದಾಗಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸಹಾಕಾರಿಗಳಗೂ ವಂದನೆಗಳನ್ನು ಸಲ್ಲಿಸುತ್ತಾ ತಮ್ಮ ಹಿಂದಿನ ಮಹಾಸಭೆಯಲ್ಲಿ ಸದಸ್ಯರಿಗೆ ನೀಡಿದ್ದ ಆಶ್ವಾಸನೆಯನ್ನು ನೆನೆಪಿಸುತ್ತಾ ಅದರಂತೆ ನೆಡಯಲಾಗಿದ್ದಕ್ಕೆ ವಿಷಾದಗಳನ್ನು ವ್ಯಕ್ತಪಡಿಸುತ್ತಾ ಅದಕ್ಕೆ ಸಕಾರಣಗಳನ್ನು ಕೊಡುತ್ತಾ ಈ ರೀತಿ ಹೇಳದರು. Demonitisation of notes ನಿಂದ ಪರೋಕ್ಷವಾಗಿ November 16 ರಿಂದ March 17 ರವರೆಗೆ ಯಾವ ಕೆಲಸ ಕಾರ್ಯಗಳು ಸರ್ಕಾರದ ಮಟ್ಟದಲ್ಲಿ ನಡೆಯಲಿಲ್ಲ. ತದನಂತರದಲ್ಲಿ ಬಂದ ರೇರಾ ಕಾಯ್ದೆಯಿಂದ, ಗೃಹನಿರ್ಮಾಣ ಸಂಸ್ಥೆಗಳಗೂ ಮತ್ತು ಭೂ ಅಭಿವೃದ್ಧಿದ್ದಾರರಿಗೂ ಬಹಳಷ್ಟು ತೊಂದರೆಯಾಗಿರುದಂತೂ ನಿಜವೆಂದು ತಿಳಹೇಳದರು. ಈ ವರ್ಷದ ಕೊನೆಯಲ್ಲಿ ಯಾವ ರೀತಿಯ ವಿಳಂಭವನ್ನು ಕಾರಾಣಾವಾಗದಂತೆ ಎಚ್ಚರಿಕೆ ವಹಿಸುತ್ತೇದೆಂದು ಸಭೆಗೆ ತಿಳಸಿದರು.

ಹಾಗೆಯೇ ಮುಂದುವರೆದು, ಸಂಘದ ನಿವೇಶನದಾರರುಗಳು ಯಾವುದೇ ವಿವರಗಳನ್ನು ಪಡೆಯಲು ಹಾಗೂ ತಮ್ಮ ಸಂದೇಹಗಳನ್ನು ನಿವಾರಿಸಿಕೊಳ್ಳುವ ಸಲುವಾಗಿ ನಮ್ಮ ಕಛೇರಿಯಲ್ಲಿ ಮುಕ್ತವಾದ ಅವಕಾಶಗಳನ್ನು ಕಲ್ಪಸಿದ್ದೇನೆ ಹಾಗೂ ಕಛೇರಿಯ ದೂರವಾಣಿಗಳಗೆ ಬರುವ ಕರೆಗಳಗೂ ಸಮರ್ಪಕವಾಗಿ ಉತ್ತರಿಸುತ್ತೇವೆ. ( ಕಛೇರಿಯ ವೇಳೆಯಲ್ಲಿ land line ಕರೆಗಳಗೆ ಮಾತ್ರ) ಎಂದು ತಿಳಸಿದರು.

ಭೂ ಅಭಿವೃದ್ಧಿ ಕಾರ್ಯವು ವಿಳಂಭವಾಗಿರುವುದೇ ರೈತರಿಂದ, ಹಣದಾಸೆಗೆ ಅನವಶ್ಯಕವಾಗಿ ನ್ಯಾಯಾಲದಲ್ಲಿ ಸುಳ್ಳುದಾವೆಗಳನ್ನು ಹೊಡಿ ತೊಂದರೆಕೊಡುವುದು, ದಾವೆಯನ್ನು ವಾಪಸ್ಸು ಪಡೆಯಲು ಪುನ: ಹೆಚ್ಚು ಹಣವನ್ನು ಕೇಳುವುದು ಅದಲ್ಲದೆ ಅಕ್ಕ ಪಕ್ಕದ ಬೇರೆಯ ಬಡಾವಣೆಯಲ್ಲಿರುವ ನಿವೇಶನದ ದರವನ್ನು ಹೋಲಿಕೆ ಕೊಡುವುದು (ನಮ್ಮ ಚ.ಅ. ದರಕ್ಕಿಂತ 3-4 ಪಟ್ಟು ವ್ಯಾಸವಾಗಿ ಜಾಸ್ತಿದೆ), ಹೀಗಾಗಿ ನಮ್ಮ ಸಂಘವು ಸಾಕಷ್ಟು ನಷ್ಟ ಮತ್ತು ತೊಂದರೆಯನ್ನು ಅನುಭವಿಸುತ್ತಿದೆ ಎಂದು ತಿಳಸಿದರು. ಬಡಾವಣೆಯ ನಿವೇಶಯ ನಿವೇಶನದ ಬೆಲೆಯನ್ನು ಮೊಟ್ಟಮೊದಲು ( ಒಂದು ಸಾರಿ) ಎಷ್ಟು ಹೆಚ್ಚಾಗಬಹುದೆಮದು ದಾಖಲೆ ಸಹಿತ ನಿವೇಶನದಾರರಿಗೆ ವಿವರಿಸಲಾಗುವುದು. ಸುಂದರ ಬಡಾವಣೆಯ ನಿರ್ಮಾಣಕ್ಕ ನಿವೇಶನದಾರರು ತಮ್ಮ ಒಮ್ಮತ

ಮನಸ್ಸಿನಿಂದ ನ್ಯಾಯಯುವಾಗಿ, ಹೆಚ್ಚಾಗಿ ಕೇಳಿದ ದರವನ್ನು ಕೊಡಬೇಕೆಂದು ಮನವಿಮಾಡಿಕೊಂಡು ಇದಕ್ಕಾಗಿ special meeting (only for) ನಿವೇಶನ ಹೊಂದಿರುವ ಸದಸ್ಯರು/ಸಹಸದಸ್ಯರುಗಳಿಗೆ ವರ್ಷದ ಕೊನೆ ಅಥವಾ ಮುಂದಿನ ವರ್ಷದ ಮೊದಲನೆಭಾಗದಲ್ಲಿ ಕರೆಯಲಾಗುವುದುದೆಂದು ತಿಳಿಸಿದರು. ಯಾವುದೇ ತಕರಾರುಗಳಿಲ್ಲದ ನಿವೇಶನವನ್ನು ಸದಸ್ಯರಿಗೆ ಕೊಡುವ ಉದ್ದೇಶ ನಮ್ಮ ಸಂಘಕ್ಕಿದೆ ಎಂದು ತಿಳಿಸಿದರು. ನಮ್ಮ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಅನಂತವಾದ ಧನ್ಯವಾದಗಳನ್ನು ಅರ್ಪಿಸಿದರು.

೮. <u>ವಂದನಾರ್ಪಣೆ:</u>

ಸಂಘದ ನಿರ್ದೇಶಕಾರದ ಶ್ರೀ.ಕಾಶಿನಾಥ್ ಪತ್ರಿಪಠ್ ರವರು ಹಾಜರಿದ್ದ ಹಾಗೂ ಸಹಕಾರ ನೀಡಿದ್ದ ಎಲ್ಲರಿಗೂ ವಂದನಾರ್ಪಣೆಯನ್ನು ಸಲ್ಲಿಸಿದರು. ಸೊಗಸಾದ ಶುಚಿ-ರುಚಿಯಿಂದ ಕೊಡಿದ್ದ ಭೋಜನದೊಂದಿಗೆ ಸಂಘದ 7ನೇ ವಾರ್ಷಿಕ ಸಭೆ ಮುಕ್ತವಾಯಿತು.